# ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕರ್ನಾಟಕ

ನೆಲಮಹಡಿ, ಕರ್ನಾಟಕ ಗೃಹ ಮಂಡಳಿ ಸಮುಚ್ಚಯ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು-560009

ಸಂಖ್ಯೆ:ಕಾ/ರೇರಾ/ಆಡಳಿತ/ಪಿಆರ್/21/2017-18 ದಿನಾಂಕ:01.12.2017

**ಅಧಿಕೃತ ಜ್ಞಾಪನಾ**

**ವಿಷಯ :** ದಿನಾಂಕ 01.08.2017 ರಿಂದ ರೇರಾ ಅಡಿಯಲ್ಲಿ ನೋಂದಣಿ ಮಾಡಿಸುವ ಎಲ್ಲಾ ಯೋಜನೆಗಳಿಗೆ ದಂಡ ವಿಧಿಸುವ ಬಗ್ಗೆ

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರವು ಜಾರಿಗೆ ತಂದಿರುವ The Real estate (Regulations and Development) ACT 2016 ರ ಆದೇಶದಂತೆ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ವಇ/109/ಕಗೃಮಂ/2017, ದಿನಾಂಕ:10.07.2017 ರಂತೆ ಕರ್ನಾಟಕ ಸರ್ಕಾರ ವಸತಿ ಸಚಿವಾಲಯದ ನಡವಳಿಕೆಗಳ ಮೂಲಕ "The Karnataka Real Estate (Regulations and Development)" Rules 2017 ಅನ್ನು ರಚಿಸಿದ್ದು, ಸದರಿ ಕಾಯ್ದೆಯು ಜಾರಿಗೆ ಬಂದ 90 ದಿನಗಳ ಒಳಗಾಗಿ ರಾಜ್ಯದಲ್ಲಿನ ಎಲ್ಲಾ Ongoing Project ಗಳು ದಿನಾಂಕ 31.07.2017 ರೊಳಗಾಗಿ ನಿಯಮಾನುಸಾರ ನೋಂದಣಿ ಮಾಡಿಸಿಕೊಳ್ಳಬೇಕಾಗಿರುತ್ತದೆ.

ತದನಂತರ ಯಾವುದೇ Ongoing Project ಗಳ ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ದಂಡ ವಿಧಿಸುವ ಮೂಲಕ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿರುತ್ತದೆ. ಅದರಂತೆ ನವೆಂಬರ್ ತಿಂಗಳಲ್ಲಿ ಮತ್ತು ನಂತರದ ದಿನಗಳಲ್ಲಿ (Ongoing Projects)ಗಳನ್ನು ನೋಂದಣಿ ಮಾಡಿಸಲು ಸಲ್ಲಿಸುವ ಅರ್ಜಿಗಳು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ ಕಲಂ 3 ರ ಉಲ್ಲಂಘನೆಯಾಗುವುದರಿಂದ, ಅಂತಹ ಯೋಜನೆಗಳನ್ನು ನೋಂದಣಿ ಮಾಡಿಸಲು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆ ಕಲಂ 59(1) ರಲ್ಲಿ ಹೇಳಿದ ರೀತ್ಯ ಆಯಾ ಯೋಜನೆಯ ಒಟ್ಟು ವೆಚ್ಚದ ಮೊತ್ತದಲ್ಲಿ ಶೇ 10% ರವರೆಗೆ ದಂಡವನ್ನು ಕಡ್ಡಾಯವಾಗಿ ಪಾವತಿ ಮಾಡಬೇಕಾಗಿರುತ್ತದೆ. ತಪ್ಪಿದಲ್ಲಿ ಅಂತಹ ಯೋಜನೆಗಳ ನೋಂದಣಿ ಪ್ರಕ್ರಿಯೆ ಸ್ಥಗಿತಗೊಳಿಸಲಾಗುವುದು.

(ಅಧ್ಯಕ್ಷರು, ರೇರಾ ರವರ ಅನುಮೋದನೆ ಮೇರೆಗೆ)

1/12.

ಕಾರ್ಯದರ್ಶಿ,
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ಬೆಂಗಳೂರು